ಜಿಲ್ಲಾ ಸಹಕಾರ ಬ್ಯಾಂಕುಗಳ ಮೂಲಕ ನೀಡಿರುವ ಸಾಲ

282(430); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ

ಅ) ರಾಜ್ಯದಲ್ಲಿ ಜಿಲ್ಲಾ ಸಹಕಾರ ಬ್ಯಾಂಕುಗಳ ಮೂಲಕ ರೈತ ಕುಟುಂಬಗಳಿಗೆ ನೀಡಿರುವ ಸಾಲ ಎಷ್ಟು ಮತ್ತು ರೈತ ಕುಟುಂಬಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ನೀಡುವುದು;

ಆ) ದೊಡ್ಡ ರೈತರಿಗೆ ನೀಡಿರುವ ಸಾಲದ ಮೊತ್ತ ಎಷ್ಟು; ಕುಟುಂಬಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಸಣ್ಣ ರೈತರಿಗೆ ನೀಡಿರುವ ಸಾದದ ಮೊತ್ತ ಎಷ್ಟು; ರೈತರಿಗೆ ನೀಡಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು?

(ಜಿಲ್ಲಾವಾರು ವಿವರ ನೀಡುವುದು)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು)

ಅ) ಜಿಲ್ಲಾ ಸಹಕಾರ ಬ್ಯಾಂಕುಗಳು ಕುಟುಂಬದ ಬದಲಿಗೆ ರೈತ ಸದಸ್ಯರಿಗೆ ಸಾಲ ನೀಡುತ್ತಿದ್ದು, 2014–15ನೇ ಸಾಲಿನಲ್ಲಿ ಮೇ 2014 ರ ಅಂತ್ಯಕ್ಕೆ ಸಹಕಾರ ಸಂಸ್ಥೆಗಳ ಮೂಲಕ ರಾಜ್ಯದ ರೈತರಿಗೆ ₹ 2253.06 ಕೋಟಿ ಅಲ್ಪಾವಧಿ ಕೃಷಿ ಸಾಲ ನೀಡಲಾಗಿದೆ. ಈ ಸಾಲವನ್ನು 404850 ರೈತರಿಗೆ ನೀಡದ್ದು ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ದೊಡ್ಡ ರೈತರಿಗೆ 720.03 ಕೋಟಿಗಳ ಅಲ್ಪಾವಧಿ ಕೃಷಿ ಸಾಲವನ್ನು ನೀಡಲಾಗಿದೆ. 111270 ರೈತರಿಗೆ ಈ ಸಾಲವನ್ನು ನೀಡಿದ್ದು ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಸಣ್ಣ ರೈತರಿಗೆ 1533.03 ಕೋಟಿಗಳ ಅಲ್ಪಾವಧಿ ಕೃಷಿ ಸಾಲವನ್ನು ನೀಡಲಾಗಿದೆ 293580 ರೈತರಿಗೆ ಈ ಸಾಲವನ್ನು ನೀಡಿದ್ದು ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ–1

2014–15ನೇ ಸಾಲಿನಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಎಪ್ರಿಲ್‌ನಿಂದ ಮೇ ಅಂತ್ಯದ ವರೆಗೆ ಒಟ್ಟು ರೈತರಿಗೆ, ಸಣ್ಣ ದೊಡ್ಡ ರೈತರಿಗೆ ವಿತರಿಸಿದ ಬೆಳೆ ಸಾಲದ ವಿವರ (₹ ಕೋಟಿಗಳಲ್ಲಿ)

ಕ್ರ.ಸಂ.	ಜಿಲ್ಲೆಯ ಹೆಸರು	ಒಟ್ಟು ರೈತರು		ದೊಡ್ಡ ರೈತರು		ಸಣ್ಣ ರೈತರು	
		ರೈತರ ಸಂಖ್ಯೆ	ಸಾಲದ ಮೊತ್ತ	ರೈತರ ಸಂಖ್ಯೆ	ಸಾಲದ ಮೊತ್ತ	ರೈತರ ಸಂಖ್ಯೆ	ಸಾಲದ ಮೊತ್ತ
1	ಬಾಗಲಕೋಟೆ	25055	88.00	6879	29.43	18176	58.57
2	ಬೆಂಗಳೂರು ಗ್ರಾಮಾಂತರ	1464	5.65	0	0.13	1464	5.52
3	ಬೆಂಗಳೂರು ನಗರ	89	0.82	0	0.00	89	0.82
4	ಬೆಳಗಾವಿ	97887	343.54	32790	128.30	65097	215.24
5	ಬಳ್ಳಾರಿ	3336	24.83	887	11.98	2449	12.85
6	ಬೀದರ್	3321	17.12	968	5.09	2353	12.02
7	ಬಿಜಾಪುರ	15771	57.60	5956	20.88	9815	36.71
8	ಚಾಮರಾಜನಗರ	877	5.11	65	0.62	812	4.49
9	ಚಿಕ್ಕಬಳ್ಳಾಪುರ	546	3.35	44	0.33	502	3.02
10	ಚಿಕ್ಕಮಗಳೂರು	24654	209.54	3304	62.59	21350	146.95
11	ಚಿತ್ರದುರ್ಗ	1523	5.79	913	3.86	610	1.93
12	ದಕ್ಷಿಣ ಕನ್ನಡ	33935	410.38	6298	128.68	27637	281.70
13	ದಾವಣಗೆರೆ	6657	16.81	1390	4.61	5267	12.20
14	ಧಾರವಾಡ	6459	34.46	1427	7.98	5032	26.48

15	ಗದಗ	4325	14.54	645	2.52	3680	12.02
16	ಗುಲ್ಬರ್ಗಾ	17919	42.94	5350	15.73	12569	27.21
17	ಹಾಸನ	1144	4.09	20	0.6	1124	3.93
18	ಹಾವೇರಿ	6437	18.28	5079	14.58	1358	3.70
19	ಕೊಡಗು	29291	344.79	6413	116.06	22878	228.73
20	ಕೋಲಾರ	55	0.53	0	0.00	55	0.53
21	ಕೊಪ್ಪಳ	1875	8.15	257	3.28	1618	4.87
22	ಮಂಡ್ಯ	4992	20.05	663	3.72	4329	16.34
23	ಮೈಸೂರು	11761	104.13	2091	23.92	9670	80.21
24	ರಾಯಚೂರು	7359	26.86	3298	12.75	4061	14.10
25	ರಾಮನಗರ	4978	19.85	76	0.32	4902	19.53
26	ಶಿವಮೊಗ್ಗ	43010	171.09	16185	44.54	26825	126.55
27	ತುಮಕೂರು	541	2.11	48	0.31	493	1.80
28	ಉಡುಪಿ	6450	68.97	956	20.56	5494	48.42
29	ಉತ್ತರ ಕನ್ನಡ	35358	167.63	5638	48.90	29720	118.73
30	ಯಾದಗಿರಿ	7781	16.06	3630	8.19	4151	7.86
	ಒಟ್ಟು	**404850**	**2253.06**	**111270**	**720.03**	**293580**	**1533.04**